OS No.5/2024

PW-1

**(ಇಂದು ದಿಃ 19-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ಪ್ರತಿವಾದಿ 2 (a to c) ರವರ ಪರ ಶ್ರೀ.HVS ವಕೀಲರಿಂದಃ-**

ನಮ್ಮ ಜಮೀನು ಇದೆ ಎಂದು ದಾವೆ ಸಲ್ಲಿಸಿದ್ದೇನೆ. ನನ್ನ ಮಾವನಿಗೆ 4 ಸರ್ವೇ ನಂಬರಗಳಲ್ಲಿ ಜಮೀನು ಇತ್ತು. ನನ್ನ ಗಂಡನ ಕುಟುಂಬಕ್ಕೆ ಕೇವಲ 2 ಸರ್ವೇ ನಂಬರ ಜಮೀನುಗಳು ಇದ್ದವು ಎಂದರೆ ಸರಿಯಲ್ಲ. ನನಗೆ ಈ ದಾವೆಯ ಸರ್ವೇ ನಂಬರ ಗೊತ್ತಿಲ್ಲ. ನಮ್ಮ ಕುಟುಂಬಕ್ಕೆ ಕೇವಲ 2 ಸರ್ವೇ ನಂಬರ ಜಮೀನುಗಳು ಇದ್ದವು , ಅವುಗಳಲ್ಲಿ ಭಾಗ ಆಗಿತ್ತು ಎಂದರೆ ಸರಿಯಲ್ಲ. ಸರ್ವೇ ನಂ. 231 ಮತ್ತು 181 ಎರಡು ಸರ್ವೇ ನಂಬರ ಜಮೀಜನುಗಳಲ್ಲಿ ಮಾತ್ರ ಜಮೀನುಗಳು ಇದ್ದವು , ಉವುಗಳಲ್ಲಿ ನನ್ನ ಗಂಡ ಮತ್ತು ಅತ್ತೆ ಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸರ್ವೇ ನಂಬರ 231/1 ರಲ್ಲಿನ 2 ಎಕರೆ ಜಮೀನನ್ನು ನನ್ನ ಗಂಡ ನೀಲಮ್ಮ ಗಂಡ ಚೆನ್ನಪ್ಪರವರಿಗೆ ಮಾರಾಟ ಮಾಡಿದ್ದಾರೆಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಗಂಡ ಸದರಿ ಸರ್ವೆ ನಂಬರಲ್ಲಿನ ತನ್ನ ಇಸೆಯಿ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ.ಅದೇ ರೀತಿ ನನ್ನ ಗಂಡ ಸರ್ವೇ ನಂ.231 /1 ರಲ್ಲಿ 1 ಎಕರೆ 10 ಗುಂಟೆ ಜಮೀನನುಜ್ನ ಒಬ್ಬ ಮಹ್ಮದ್ ಶಪೀ ತಂದೆ ಇಮಾಮ ಸಾಬ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಾನು ನನ್ನ ಗಂಡನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ದಿನಾಂಕ 20.07.2011 ರ ನೋಂದಾಯಿತ ಖರೀದಿ ಪತ್ರದ ಮೂಲ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಗಂಡನ ಸಹಿಯನ್ನು ನೋಡಿ ಗುರುತಿಸಿದ್ದು, ಖರೀದಿ ಪತ್ರವನ್ನು ನಿಡಿ-1 ಎಂದು , ಸಾಕ್ಷಿಯ ಗಂಡನ ಸಹಿಯನ್ನು ನಿಡಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿನಾಂಕ 17.02.2010 ರ ಸಾಲ ಪತ್ರದ ಮೂಲ ಪ್ರತಿಯನಮ್ನು ತೋರಿಸಲಾಗಿ ಅದರಲ್ಲಿರುವ ಸಹಿ ನನ್ನ ಗಂಡನದ್ದು ಆದರೆ ಸ್ವಲ್ಪ ವ್ಯತ್ಯಾಸ ಇದೆ ಎಂದು ಹೇಳಿದ್ದು ಸದರಿ ದಾಖಲಾತಿಯನ್ನು ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಡಿ-2 ರ ಹಿಂಬದಿ ಪುಟ ತೋರಿಸಲಾಗಿ ಸಾಕ್ಷಿ ಅದಲ್ಲಿರುವ ನನ್ನ ಗಂಡನದು ಸಹಿ ಇದ್ದು ಅದು ಸ್ವಲ್ಪ ವ್ಯತ್ಯಾಸ ಇದೆ ಎಂದು ಹೇಳಿರುತ್ತಾರೆ.

ನನ್ನ ಮಗಳ ಮದುವೆ 2011 ರಲ್ಲಿ ಆಗಿದೆ ಎಂದರೆ ಸರಿ. ಮಗಳ ಮದುವೆ ಖರ್ಚಿಗಾಗಿ ನನ್ನ ಗಂಡ ಗ್ರಾಮದಲ್ಲಿ ಸ್ವಲ್ಪ ಸಾಲ ಮಾಡಿದ್ದರು ಎಂದರೆ ಸರಿ. ಸದರಿ ಸಾಲ ತೀರಿಸಲು ಜಮೀನನ್ನು ಮಹ್ಮದ ರಫೀಕ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರ್ೆಿ ಸಾಕ್ಷಿ ಮುಂದುವರೆದು ನನ್ನ ಗಂಡನ ಇೆಸಯ 1 ಎಕರೆ 10 ಗುಂಟೆ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ನನ್ನನ ಗಂಡ ಅದೇ ದಿನ 1 ಎಕರೆ 10 ಗುಂಟೆ ಮತ್ತು ದಾವಾ

OS No.5/2024

PW-1

ಆಸ್ತಿಯನ್ನು ಮಾರಾಟ ಮಾಡಿದರು ಎಂದರೆ ಸರಿಯಲ್ಲ. 2011 ರಿಂದ ಇಲ್ಲಿಯವರೆಗೆ ಮಹ್ಮದ್ ರಫೀಕ್ ದಾವಾ ಆಸ್ತಿಯ ಕಬ್ಜಾದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವೆರದು ನನಗೆ ಬೆಳೆಯಲ್ಲಿ ಭಾಗ ಕೋಡುತ್ತಿದ್ದರು ಎಂದು ಹೇಳುತ್ತಾರೆ. ನನ್ನ ಗಂಡ ಕುಟುಂಬದ ಆಸ್ತಿಗಳಲ್ಲಿ ತನ್ನ ಭಾಗ ತೆಗೆದುಕೊಂಡು ತನ್ನ ಭಾಗದ ಎಲ್ಲಾ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಮಹ್ಮದ ರಫೀಕ ದಾವಾ ಜಮೀನಲ್ಲಿ ಕಬ್ಜಾದಲ್ಲಿದ್ದು ನನಗೂ ದಾವಾ ಜಮೀನಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 2011ರಲ್ಲಿ ನನ್ನ ಗಂಡ ದಾವಾ ಸ್ವತ್ತನ್ನು ಮಾರಾಟ ಮಾಡಿದಾಗಿನಿಂದ ಮಹ್ಮದ ರಫೀಕ ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಕೇವಲ 2 ಸರ್ವೇ ನಂಬರ ಜಮೀನುಗಳು ಇದ್ದವು , ನನ್ನ ಗಂಡ ವಅವುಗಳಲ್ಲಿ ಭಾಗ ಪಡೆದು ತನ್ನ ಭಾಗ ದ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ, ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

(1ನೇ ಪ್ರತಿವಾದಿ ಪರ ಶ್ರೀ GAP ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು ನೀಡಿಲಾಯಿತು)

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**